ಪಿ.ಡಬ್ಲ್ಯೂ – **1**

ದಿನಾಂಕಃ **09.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದಃ**

ಪ್ರತಿವಾದಿಗಳು ನನ್ನ ಜಮೀನಿನಲ್ಲಿ ಲೈನು ಎಳೆಯುವ ಮುನ್ನ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜಮೀನಿನಲ್ಲಿ 3 ತೆಂಗಿನ ಮರ ಮತ್ತು 5 ಅಡಿಕೆ ಮರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ಆ ತೆಂಗಿನ ಮರ ಮತ್ತು ಅಡಿಕೆ ಮರಕ್ಕೆ ಪ್ರತಿವಾಗಿಗಳು ನನಗೆ ಪರಿಹಾರ ನೀಡಿರುತ್ತಾರೆ ಎಂದರೆ ಸರಿ. ನನ್ನ ನಾಲ್ಕು ವರೆ ಗುಂಟೆ ಜಮೀನಿಗೆ ಪ್ರತಿವಾದಿಗಳು ಪರಿಹಾರ ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ನನ್ನ ಜಮೀನಿನಲ್ಲಿ ಇದ್ದ ಮರಗಳಿಗೆ ಮತ್ತು ಜಮೀನಿಗೆ ಡಿ.ಸಿ. ರವರ ಆದೇಶದಂತೆ ಪರಿಹಾರ ನೀಡಿರುತ್ತಾರೆ ಎಂದರೆ ಡಿ.ಸಿ. ರವರ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ ಅದರೆ ಪರಿಹಾರ ನೀರುತ್ತಾರೆ. ಲೈನ್ ಕೆಳಭಾಗದಲ್ಲಿ ಉಳುಮೆ ಮಾಡಬಹುದು ಎಂದರೆ ಸರಿ . ಅದರೆ ಏನನ್ನೂ ಬೆಳೆಯಲು ಅಗುವುದಿಲ್ಲ. ಲೈನ್ ಕೆಳಭಾಗದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯ ಬಹುದು ಎಂದರೆ ಸರಿಯಲ್ಲ. ಲೈನ್ ಕೆಳಭಾಗದಲ್ಲಿ ಯಾವ ಬೆಳೆಯನ್ನು ಬೆಳೆಯಲು ಆಗುತ್ತಿಲ್ಲ ಎಂದು ಪ್ರತಿವಾದಿಗಳಿಗೆ ಪತ್ರ ನೀಡಿರುತ್ತೇವೆ. ಆ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿ.ಪಿ.1 ನ್ನು ನಮ್ಮ ತಂದೆಯವರಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಮಾಡಿದ ಮಹಜರಿಗೆ ನನ್ನ ತಂದೆಯ ಸಹಿ ಇರುತ್ತದೆ ಎಂದರೆ ಸರಿ. ನನ್ನ ಜಮೀನು ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿಗೆ ಸೇರುತ್ತದೆ. ನಿ.ಪಿ.12 ತುಮಕೂರು ತಾಲ್ಲೂಕಿಗೆ

ಪಿ.ಡಬ್ಲ್ಯೂ – 1

ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಗುಬ್ಬಿ ತಾಲ್ಲೂಕಿನಲ್ಲಿಯೂ ತೋಟಗಾರಿಕೆ ಇಲಾಖೆ ಇರುತ್ತದೆ ಎಂದರೆ ಸರಿ. ನಿ.ಪಿ.13 ತುಮಕೂರು ತಾಲ್ಲೂಕಿಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಗುಬ್ಬಿ ತಾಲ್ಲೂಕಿನಲ್ಲಿಯೂ ಕೃಷಿ ಉತ್ಪನ್ನ ಮಾರುಕಟ್ಟೆ ಇರುತ್ತದೆ ಎಂದರೆ ಸರಿ. ವಸಂತನರಸಾಪುರದಿಂದ ನಮ್ಮ ಗ್ರಾಮ ಅಂದಾಜು 15 ರಿಂದ 20 ಕಿಲೋ ಮೀಟರ್ ದೂರ ಆಗುತ್ತದೆ. ನಿ.ಪಿ.14 ಕ್ಕೂ ಮತ್ತು ನನಗೂ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನಿ.ಪಿ.16 ಕ್ರಯದ ಕರಾರು ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ 2 ರಿಂದ 3 ಕಿಲೊ ಮೀಟರ್ ದೂರ ಆಗಬಹುದು. ಸದರಿ ಕರಾರು ಕ್ರಯಪತ್ರ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಕ್ರಯ ಅಗಿದೆ, ಆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಡಿ.ಸಿ. ರವರ ಆದೇಶದ ಪ್ರಕಾರ ಪ್ರತಿವಾದಿಗಳು ನೀಡಿರುವ ಪರಿಹಾರ ಸೂಕ್ತವಾಗಿದ್ದು ಹೆಚ್ಚಿನ ಪರಿಹಾರ ಪಡಯಲು ಸುಳ್ಳು ದಾಖಲಾತಿಗಳನ್ನು ಸಲ್ಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**ಪಿ.ಡಬ್ಲ್ಯು – 1**